( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ **19/04/2022**
ಅಸಲು ದಾವೆ.ನಂ. **161/2019**
ಪಿ.ಡಬ್ಲ್ಯೂ1

(ಮುಂದುವರೆದ ಪಾಟೀ ಸವಾಲುಃ ಶ್ರೀ. ಜೆ.ಎಸ್. ವಕೀಲರಿಂದ ಪ್ರತಿವಾದಿಯ ಪರವಾಗಿ )

ಸಾಕ್ಷಿಗೆ ದಾವಾ ಸ್ವತ್ತು ಹಾಗೂ ದಾವಾ ಸ್ವತ್ತಿನ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಇರುವ 1 ನೇ ಪ್ರತಿವಾದಿಯ ಜಮೀನಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ಒಪ್ಪಿದ ಕಾರಣ ಅವುಗಳನ್ನು ನಿಡಿ-6 ರಿಂದ ನಿಡಿ-8 ಎಂದು ಗುರುತಿಸಲಾಯಿತು. ಪ್ರತಿವಾದಿಯರು ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ಇರುವ 1 ನೇ ಪ್ರತಿವಾದಿಯ ಜಮೀನಿಗೆ ಹೋಗಲು ತಿರುಗಾಡುವ ದಾರಿ ಇದೆ ಎಂದು ದಾವಾ ಸ್ವತ್ತಿನ ನನ್ನ ಸ್ವಾಧೀನಕ್ಕೆ 2019 ನೇ ಇಸವಿಯಿಂದ ತಕರಾರು ಮಾಡುತ್ತಿದ್ದಾರೆ ಎಂದು ನಾನು ನನ್ನ ದಾವೆಯಲ್ಲಿ ಸುಳ್ಳು ಹೇಳಿದ್ದು, ಸದರಿ ತಿರುಗಾಡುವ ರಸ್ತೆ ದಾವಾ ಸ್ವತ್ತಿನ ಉತ್ತರ ದಿಕ್ಕಿನಲ್ಲಿ ಮೊದಲಿನಿಂದಲೂ ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಚಿಕ್ಕಪ್ಪನ ಕಾಲದಿಂದಲೂ ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ಆ ರೀತಿ 8 ಅಡಿಯ ತಿರುಗಾಡುವ ರಸ್ತೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಿರುಗಾಡುವ ಜಾಗದಲ್ಲಿ ಯಾವುದೇ ಬೆಳೆ ಇಲ್ಲದ ಕಾರಣ ಅಲ್ಲಿ ಯಾವುದೇ ಬೆಳೆ ನಾಶವಾಗಿರುದಿಲ್ಲ ಹಾಗೂ ನಾನು ನನ್ನ ದಾವೆಯಲ್ಲಿ ಆ ರೀತಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಸ್ವತ್ತಿಗೆ ಯಾವುದೇ ತಂಟೆ ತಕರಾರು ಮಾಡಿರುವುದಿಲ್ಲ ಹಾಗೂ ಅವರು ತಿರುಗಾಡುವ ರಸ್ತೆ ಉಪಯೋಗಿಸುವುದರಿಂದ ನನಗೆ ಯಾವುದೇ ತೊಂದರೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಮತ್ತು ಅವರ ಕುಟುಂಬದವರೊಂದಿಗೆ ನನಗೆ ಹೊಂದಾಣಿಕೆ ಇಲ್ಲದ ಕಾರಣ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

( ಮರು ವಿಚಾರಣೆ ಇರುವುದಿಲ್ಲ)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )
ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.